**<u>ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ-</u>**

ವಾದಿಗಳಿಗೆ ಭಾಗ ಕೊಟ್ಟಿದ್ದೇವೆ ಎಂದು ತೋರಿಸಲು ಇದುವರೆಗೂ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಮ್ಮ ಲಿಖಿತ ಹೇಳಿಕೆಯಲ್ಲಿ ವಕೀಲರ ಮೂಲಕ ಏನು ಹೇಳಿ ಬರೆಸಿದ್ದೇನೆ ಎಂದು ನನಗೆ ಗೊತ್ತಿದೆ. ನನ್ನ ಬಳಿ ಕ್ರೆಟಾ ಕಾರು ಇರುತ್ತದೆ. ಅದರ ನಂ. ಕೆಎ 45 ಎಂ. 5048 ಆಗಿರುತ್ತದೆ. ಮೈಸೂರು ಸಿಟಿ, ಹಿನಕಲ್, ವಿಜಯನಗರಕ್ಕೆ ಹೊಂದಿಕೊಂಡಂತೆ ಒಂದು ಆರ್.ಆರ್.ಸಿ ಮನೆ ಇದೆ ಎಂದರೆ ಸರಿ, ಅದು ಇತ್ತೀಚಿಗೆ ಅಂದರೆ 3 ವರ್ಷಗಳ ಹಿಂದೆ ಕಟ್ಟಿಸಿರುತ್ತೇನೆ. ಅದರ ಅಳತೆ 30 X60 ಅಡಿ ಆಗಿರುತ್ತದೆ. ನಾನು ಈಗ ಅಲ್ಲಿಯೆ ವಾಸವಾಗಿರುತ್ತೇನೆ ಎಂದರೆ ಸರಿ. ಅದರ ಮನೆ ನಂಬರ್, ಸೈಟ್ ನಂಬರ್ ಗೊತ್ತಿಲ್ಲ. ಚೆಕ್ಕುಬಂದಿ ಸಹ ಗೊತ್ತಿಲ್ಲ. ನಾನು ಸದರಿ ಮನೆಯ ಮಾಲಿಕ ಎಂದರೆ ನನ್ನ ಹೆಂಡತಿ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ. ಅವರ ಹೆಸರು ನಾಗರತ್ನಮ್ಮ. ಕೃಷ್ಣೆ ಅರಸ್ ರವರ ಸಮಸ್ತ ಕುಟುಂಬದಿಂದ ಬಂದ ಆದಾಯದಿಂದ ಸೈಟ್ ಖರೀದಿಸಿ ಮನೆ ಕಟ್ಟಿಸಿ ಹೆಂಡತಿ ಹೆಸರಿನಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಲಿಖಿತ ಹೇಳಿಕೆ ಸಲ್ಲಿಸುವ ಮೊದಲು ವಾದ ಎನು ದಾವೆಯಲ್ಲಿ ಏನು ಬರೆಸಿ ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ.

ನನ್ನ ಹೇಳಿಕೆಯಲ್ಲಿ ಮೈಸೂರಿನಲ್ಲಿರುವ ಮನೆಯನ್ನು ನನ್ನ ಹೆಂಡತಿಯ ಸ್ವಯಾರ್ಜಿತ ಎಂದು ಹೇಳಿ ಬರೆಸಿಲ್ಲ. ಸದರಿ ಮನೆ ಯಾರಿಗೆ ಸೇರಿದ್ದು ಎಂದು ಬರೆಸಿ ಹಾಕಿದ್ದೇನೆ ಎಂದು ಈಗ ಗೊತ್ತಿಲ್ಲ. ನನ್ನ ಹೆಂಡತಿಗೆ ಏನು ಆದಾಯ ಇದೆ ಎಂದು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ಹೆಂಡತಿ ಗೃಹಿಣಿ ಎಂದರೆ ಸರಿ. ನಾನು 1 ನೇ ಪ್ರತಿವಾದಿ ಮತ್ತು ನನ್ನ ಹೆಂಡತಿ ಎಲ್ಲರೂ ಸೇರಿಕೊಂಡು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಸೈಟ್ ನಲ್ಲಿ ಮನೆ ಕಟ್ಟಿಸಿಕೊಂಡು ವಾದಿಗೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ಕಾರು ಖರೀದಿಸುವಾಗ ಎಷ್ಟು ಹಣ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ಕರ್ನಾಟಕ ಬ್ಯಾಂಕ್ ನಲ್ಲಿ 14 ಲಕ್ಷ ರೂ. ಲೋನ್ ತೆಗೆದುಕೊಂಡು ಖರೀದಿಸಿದ್ದೇನೆ ಎನ್ನುತ್ತಾರೆ. ಜಮೀನಿನಿಂದ ಬಂದ ಆದಾಯದಿಂದ ತಿಂಗಳ ಇ.ಎಂ.ಐ ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್.ಐ.ಸಿ ಕಮಿಶನ್ ನಿಂದ ಬಂದ ಹಣದಿಂದ ಕಟ್ಟುತ್ತಿದ್ದೇನೆ. ಎಲ್.ಐ.ಸಿ ವಾರ್ಷಿಕ ಆದಾಯ 14 ಲಕ್ಷ ಬರುತ್ತದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಕಿಲ್ಲ. ದಾವಾ ಐಟಂ ನಂ. 6 ರ ಸ್ವತ್ತು ಕಮರ್ಶಿಯಲ್ ಕಾಂಪ್ಲೇಕ್ಸ್ ಒಟ್ಟು ಕುಟುಂಬದ ಆದಾಯದಿಂದ ಕಟ್ಟಿದ್ದು ಎಂದರೆ ಸರಿಯಲ್ಲ. ಅದನ್ನು ಸಹ ಎಲ್.ಐ.ಸಿ ಕಮಿಶನ್ ನಿಂದ ಬಂದ ಹಣದಿಂದ ಕಟ್ಟಿಸಿರುತ್ತೇನೆ. ಇದುವರೆಗೂ ನಾನು ಎಲ್.ಐ.ಸಿ

ಯಿಂದ ಇಷ್ಟು ಆದಾಯ ಬರುತ್ತದೆ ಎಂದು ತೋರಿಸುವ ದಾಖಲೆ ಹಾಜರು ಪಡಿಸದ ಕಾರಣ ನಾನು ಸುಳ್ಳು ಕೃಷ್ಣಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಐಟಂ ನಂ. 6 ಕೆಳ ಅಂತಸ್ಥಿನಲ್ಲಿ 8 ಮಳಿಗೆಗಳು ಇವೆ, ಮೇಲಿನ ಅಂತಸ್ಥಿನಲ್ಲಿ 3 ಮಳಿಗೆಗಳು ಇವೆ. ಒಂದೊಂದು ಮಳಿಗೆಗೂ ಎಷ್ಟೇಷ್ಟು ಬಾಡಿಗೆ ನಿಗದಿ ಪಡಿಸಲಾಗಿದೆ ಎಂದರೆ ಸಾಕ್ಷಿ ಒಂದೊಂದಕ್ಕೂ ಒಂದು ಬಾಡಿಗೆ ಇದೆ ಒಟ್ಟು 30 ಸಾವಿರ ರೂ. ಬಾಡಿಗೆ ಇದೆ ಎನ್ನುತ್ತಾರೆ. ಮಳಿಗೆಗಳನ್ನು ಬಾಡಿಗೆ ಕೊಡಲು ಬಾಡಿಗೆ ಕರಾರನ್ನು ಮಾಡಿಕೊಡಲಾಗಿದೆ. ಅಂತಹ ಬಾಡಿಗೆ ಕರಾರುಗಳು ನನ್ನ ಬಳಿ ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ಅವುಗಳನ್ನು ಹಾಜರುಪಡಿಸಿದರೆ ತಿಂಗಳಿಗೆ ಎಷ್ಟು ಬಾಡಿಗೆ ಬರುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ಸದರಿ ವಿಚಾರವಾಗಿ ಲಿಖಿತ ಹೇಳಿಕೆಯಲ್ಲಿ ಬರೆಸಿ ಹಾಕಿಲ್ಲ. ಸದರಿ ಬಾಡಿಗೆದಾರರಿಂದ ಎಷ್ಟು ಹಣ ಅಡ್ವಾನ್ಸ್ ಪಡೆದುಕೊಳ್ಳಲಾಗಿದೆ ಎಂದು ಗೊತ್ತಿಲ್ಲ. ಸದರಿ ಹಣವನ್ನು ಎಲ್ಲಿ ಇಟ್ಟಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ನೆ ಪ್ರತಿವಾದಿ ಮತ್ತು ಕೃಷ್ಟೆ ಅರಸು ರವರು ಸಂಪಾದನೆ ಮಾಡಿದ ಅಸ್ತಿಗಳು ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳಲ್ಲಿ ವಾದಿಗೆ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ಭಾಗಾಂಶವನ್ನು ಕೊಟ್ಟರೆ ನನಗೆ ನಷ್ಟವಾಗುತ್ತದೆ ಎಂದು ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್**

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.